ಶಿಕ್ಷಣ ಕ್ಷೇತ್ರದಲ್ಲಿ ಈಗ ಮುಕ್ತ ವಾತಾವರಣ ಇದೆ. ಆದರೆ ನಮ್ಮ ಕಾಲಕ್ಕೆ ಹಾಗಿರಲಿಲ್ಲ. ನನಗೆ ಮುಖ್ಯ ಆಸ್ಥೆ ಇದ್ದಿದ್ದು ಸಂಸ್ಕೃತದಲ್ಲಿ. ಆದರೆ ನಾನು ಇಂಗ್ಲಿಷನ್ನು ಆಯ್ಕೆ ಮಾಡಿಕೊಂಡೆ. ಇಂಗ್ಲಿಷಿನಲ್ಲಿಯೂ ಆಸಕ್ತಿ ಇತ್ತು. ಆಗ ಬಾಂಬೆ ಯೂನಿವರ್ಸಿಟಿಗೇ ರ್‍ಯಾಂಕ್ ಬಂದಿದ್ದೆ. ಬಿ.ಎ.ಗೆ ಹತ್ತು ವಿಷಯ ಇಂಗ್ಲಿಷ್ ಇತ್ತು. ಎಂ.ಎ.ಗೆ ಎಂಟು ವಿಷಯ ಇದ್ದವು. ಕಾಲೇಜಿನಲ್ಲಿ ಎರಡನೇ ವರ್ಷದ ನಂತರ ನಾನು ಇಂಗ್ಲಿಷ್ ಬಿಟ್ಟು ಬೇರೆ ವಿಷಯ ಓದಲೇ ಇಲ್ಲ. ಈಗ ಯೋಚಿಸಿದರೆ ಅದು ವೇಸ್ಟ್ ಅನಿಸುತ್ತಿದೆ. ಯಾವುದೋ ದೇಶದ ಸಿವಿಲೈಜೇಶನ್, ಪಾಶ್ಚಾತ್ಯದ ಕುರಿತ ವಿಷಯಗಳನ್ನು ಓದುವುದರಲ್ಲಿ ಯಾವ ಅರ್ಥವೂ ಇಲ್ಲ. ಅದಕ್ಕಿಂತ ಹೆಚ್ಚಾಗಿ ನಮ್ಮ ದೇಶ, ನಮ್ಮ ಸಂಸ್ಕೃತಿಗಳ ಬಗ್ಗೆ ಅಭ್ಯಾಸ ಮಾಡಬೇಕಿತ್ತು. ಸಂಸ್ಕೃತ ನನಗೆ ಇಷ್ಟ ಇತ್ತು. ಆ ಆಸಕ್ತಿಯನ್ನು ಉಳಿಸಿಕೊಂಡರೆ ನನಗೆ ಹೆಚ್ಚು ಲಾಭ ಆಗುತ್ತಿತ್ತು ಅನಿಸುತ್ತದೆ. ಬಹುಶಃ ಆಗ ಯಾರಾದರೂ ಕೌನ್ಸೆಲಿಂಗ್ ಮಾಡುವವರು ಸಿಕ್ಕಿದ್ದರೆ ಹಾಗೆಯೇ ಮಾಡುತ್ತಿದ್ದೆನೋ ಏನೋ...

● **ಸಂಶೋಧನಾ ಕ್ಷೇತ್ರದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಕೆಲಸದ ಬಗ್ಗೆ ನೀವೇನು ಹೇಳುತ್ತೀರಿ?**

ಈಗ ತಂತ್ರಜ್ಞಾನದ ಕಾರಣದಿಂದ ಮಾಹಿತಿ ಸಂಗ್ರಹದ ವಿಷಯದಲ್ಲಿ ದೊಡ್ಡ ಕ್ರಾಂತಿಯೇ ಆಗಿದೆ. ಅಂತರ್ಜಾಲದಿಂದ ಮಾಹಿತಿ ಸಂಗ್ರಹ ಸುಲಭವಾಗಿದೆ. ಆದರೆ ಗಮನಿಸಬೇಕಾದ ಸಂಗತಿ ಒಂದಿದೆ. 'ನ್ಯೂಯಾರ್ಕ್ ರಿವ್ಯೂ ಆಫ್ ಬುಕ್ಸ್' ಎಂಬ ಒಂದು ಪತ್ರಿಕೆ ಇದೆ. ಅದರಲ್ಲಿ ಇತ್ತೀಚೆಗೆ ದೊಡ್ಡ ಚರ್ಚೆ ನಡೆಯಿತು. ಆ ಚರ್ಚೆಯ ಸಾರಾಂಶ ಇಷ್ಟೆ: ಅಮೆರಿಕ ವಿಶ್ವವಿದ್ಯಾಲಯವೂ ಸಹ ಜ್ಞಾನಕ್ಕೆ ಯಾವುದೇ ಹೊಸ ಕೊಡುಗೆ ನೀಡುತ್ತಿಲ್ಲ. ಜ್ಞಾನಕ್ಕೆ ಕೊಡುಗೆ ನೀಡುವುದು ತುಂಬ ಕಡಿಮೆ ಆಗಿದೆ. ಕನ್ನಡದಲ್ಲಿಯೂ ಈಚೆಗೆ ಒಂದು ಲೇಖನ ಓದಿದೆ. ಆ ಲೇಖಕರು ಹೇಳುವ ಪ್ರಕಾರ – ನಮ್ಮ ವಿಶ್ವವಿದ್ಯಾಲಯಗಳಲ್ಲಿ, ಐಐಟಿಗಳಲ್ಲಿ ಅದ್ಭುತ ಬೋಧಕರು ಇದ್ದಾರೆ. ಇರುವ ಜ್ಞಾನವನ್ನು ಚೆನ್ನಾಗಿ ಹೇಳಿಕೊಡುತ್ತಾರೆ. ಆದರೆ ಹೊಸ ದಾರಿಗಳನ್ನು ಅವರು ತೆರೆಯುವುದಿಲ್ಲ. ಕೆ. ಕೃಷ್ಣಮೂರ್ತಿ ದೊಡ್ಡ ವಿದ್ವಾಂಸರು. ಅವರು ತುಂಬ ಓದಿಕೊಂಡಿದ್ದರು. ಆದರೆ ಅವರಿಗೆ ಕಾವ್ಯಮೀಮಾಂಸೆಯದ್ದೋ ಇನ್ಯಾವುದೋ ಒಂದು ತತ್ತ್ವವನ್ನು ಇಲ್ಲಿ ಅನ್ವಯಿಸಬಹುದಲ್ಲವಾ ಎಂದು ಕೇಳಿದರೆ, 'ಅದು ನನ್ನ ಕೆಲಸ ಅಲ್ಲ. ಏನು ಇದೆಯೋ ಅದನ್ನು ಸ್ಪಷ್ಟವಾಗಿ ಹೇಳುವುದಷ್ಟೇ ನನ್ನ ಕೆಲಸ' ಎಂದುಬಿಡುತ್ತಿದ್ದರು. ಈ ಮನೋಧರ್ಮ ಸರಿಯಲ್ಲ. ಗೊತ್ತಿಲ್ಲದೆ ಇರುವುದನ್ನು ಗೊತ್ತು ಮಾಡಿಕೊಳ್ಳುವುದೇ ಜ್ಞಾನ. ನಮ್ಮಲ್ಲಿ ಇಂಥ ಪ್ರಯತ್ನ ಎಷ್ಟು ನಡೆಯುತ್ತಿವೆ?

ಫುಕೋ, ಡೆರಿಡಾ ಇವರೆಲ್ಲ ಅಭಿಜಾತ ಚಿಂತಕರು (ಒರಿಜಿನಲ್ ಥಿಂಕರ್ಸ್). ಜ್ಞಾನಕ್ಕೆ ಕೊಡುಗೆ ನೀಡಿದವರು. ಹೊಸ ಮಾರ್ಗಗಳನ್ನು ತೆರೆದವರು. ಕಾವ್ಯ ಇರಲಿ, ಕಾದಂಬರಿ ಇರಲಿ, ಯಾವುದೇ ಕಲಾಪ್ರಕಾರಗಳಿರಲಿ, ಹೊಸ ಮಾರ್ಗಗಳನ್ನು ತೆರೆಯುವವರು ಗ್ರೇಟ್. ಅವರು ಬಹಳ ದೊಡ್ಡ ಲೇಖಕರು ಆಗಿರಲಿಕ್ಕಿಲ್ಲ. ಅವರು ಬರೆದಿದ್ದು ಕ್ಲಾಸಿಕ್ ಆಗಿರಲಿಕ್ಕಿಲ್ಲ. ಆದರೆ ಹೊಸ ಮಾರ್ಗವೊಂದನ್ನು ಅವರು ಕಾಣಿಸಿರುತ್ತಾರೆ. ಶಿವರಾಮ ಕಾರಂತರು 'ಬೆಟ್ಟದ ಜೀವ' ಕಾದಂಬರಿ ಬರೆದಾಗ ಇಂಗ್ಲಿಷ್‌ನ ಪ್ರಸಿದ್ಧ ಲೇಖಕರೊಬ್ಬರು 'ಇದು ಕಾದಂಬರಿಯೇ ಅಲ್ಲ, ಪ್ರವಾಸಗ್ರಂಥ' ಎಂದು ಹೇಳಿದ್ದರು. ಆದರೆ ನಾನು ಆ ಕಾದಂಬರಿ ಯಾಕೆ ಮುಖ್ಯ, ಮಹತ್ವದ್ದು ಎಂದು ಬಹಳ ಆಳವಾಗಿ ಬರೆದೆ. ಅಂಥದೊಂದು ಕಾದಂಬರಿ ಇನ್ಯಾವ ಭಾಷೆಯಲ್ಲೂ ಬಂದಿಲ್ಲ.

● **ನಾವೆಲ್ಲರೂ ಕಲೋನಿಯಲ್ ಸಂಸ್ಕೃತಿಯಲ್ಲಿ ಬೆಳೆದವರು. ಆದರೆ ಫ್ರಾಂಜ್ ಫಾನಾನ್ ಥರ ವಸಾಹತುವಾದವನ್ನೂ ಕಲೋನಿಯಲ್ ಹೊಸ ರೀತಿಯಲ್ಲಿ ಅರ್ಥೈಸುವ ಚಿಂತಕರು ನಮ್ಮಲ್ಲಿ ಯಾಕೆ ಬರಲಿಲ್ಲ?**

ಇದು ದೊಡ್ಡ ಪ್ರಶ್ನೆ. ಎಲಿಯಟ್‌ಗೆ ವಿಶೇಷ ಉಪನ್ಯಾಸ ನೀಡಲು ಕೇಂಬ್ರಿಜ್